ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 2

ಬೆಂಗಳೂರು, ಗುರುವಾರ, ಜನವರಿ ತಾ॥ 10, ಸನ್ 1907.

II ನೆ ಭಾಗ.

ಇಂಡ್ಯೂಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 17ನೆ ಡಿಸೆಂಬರ್ 1906.

ಕೋಲಾರ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಚಿಕ್ಕಬಳ್ಳಾಪುರ ವಗ್ಯೆರೆ ತಾಲ್ಲೂಕುಗಳಲ್ಲಿನ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿ ಅರಗಿನ ಪೈರು ರೂಢಿಸಿಕೊಳ್ಳುವ ಹಕ್ಕು ಹರಾಜು ಆಗುವ ಬಾಬಿನಲ್ಲಿ 1817ನೆ ಇಸವಿ ಜನವರಿ 3ನೆ ಮಕ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 1-2ನೆ ಪೇಜುಗಳಲ್ಲಿ ಪ್ರಾಯಿಷ್ಮಾಡಲ್ಪಟ್ಟಿರುವ ನೋಟಿಫಿಕೇಷನ್‌ಗೆ ಅರಗು ಸಾಗುವಳಿದಾರು ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್

ಇಸ್ತಿಹಾರ್.

ಪರಾಪ್ ತಾರೀಖು, 21ನೆ ಫೆಬ್ರವರಿ 1907.

ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಜೋಡಿ ಮಲ್ಲಸಂದ್ರ ಗ್ರಾಮವು ಸರ್ಕಾರಕ್ಕೆ ಬರತಕ್ಕ ಗುಶ್ತಾ ಮೊ ಬಲಿಗಿಗಾಗಿ 1907ನೆ ಇಸವಿ ಫೆಬ್ರವರಿ ಮಾಹೆ 21ನೆ ತಾರೀಖಿನಲ್ಲಿ ದಿವಿ 11 ಘಂಟೆಗೆ ಬೆಂಗಳೂರು ಸಬ್ ಡಿವಿಜನ್ ಅಸಿಸ್ಟಾಂಟ್ ಕಮಿಷನರ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಿ ಇದೆ.